ಕಾವ್ಯಶ್ರೀ, ಶೋರಾಪುರ
ಭೂಮಿಗೆ ಭಾರ ಯಾವುದು?




ಪರಿಸರ ಮಾಲಿನ್ಯ.

ಭಾರತೀ ಗಂಗಾಧರ್, ಬೆಂಗಳೂರು
ಕುಟುಂಬದ ಸದಸ್ಯರು ಅಕ್ಕಪಕ್ಕದವರಂತೆ ಬದಲಾಗಿದ್ದಾರಲ್ಲಾ?
ಗುಡ್. ನಿಮ್ಮ ಪ್ರತಿ ಚಲನವಲನವನ್ನು ಗಮನಿಸುವುದರಿಂದ ನೀವು ದಾರಿ ತಪ್ಪುವುದು ತಪ್ಪುತ್ತದೆ.

ರಾಜೇಂದ್ರ ಹೆಗಡೆ, ಹಾವೇರಿ
'ಹೆಣ್ಣು, ಹೊನ್ನು, ಮಣ್ಣು' ಗಾದೆಯಲ್ಲಿ ಹೆಣ್ಣೇ ಮೊದಲಿರುವುದೇಕೆ? ಗಂಡೇಕಿಲ್ಲ?
ಅವೆರಡು ಬರಲು, ಹೋಗಲು ಅವಳೇ ಕಾರಣವಾದ್ದರಿಂದ. ಗಂಡು ಹೊಂದುವುದು ಗಾದೆಗಲ್ಲ, ತಗಾದೆಗೆ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ
ವೆಡ್ಡಿಂಗ್‌ಗೂ, ವೆಲ್ಡಿಂಗ್‌ಗೂ ವ್ಯತ್ಯಾಸವೇನು?



ಇದು ಮೋಹಬಂಧ, ಅದು ಲೋಹಬಂಧ.

ಪ್ರೀತಿ ಕಿರಣ್, ಬೆಂಗಳೂರು
ಪ್ರಾರಬ್ಧ ಕರ್ಮಗಳಿಗೆ ಒಳ್ಳೆಯವರು ಮಾತ್ರ ಏಕೆ ವಾರಸುದಾರರು?
ಅವರ ಮೃದುತ್ವವೇ; ಕುಟ್ಟೆಹುಳು ಕುಟ್ಟುವುದು ಮರವನ್ನೇ, ಕಬ್ಬಿಣವನ್ನಲ್ಲ.

ವಿಜಯಕುಮಾರ್ ಎಚ್.ಕೆ, ರಾಯಚೂರು
ಬೆಂಗಳೂರಲ್ಲಿ ಪಿಂಡಕ್ಕೆ ನಾಲ್ಕು ಸಾಸಿವೆ ಕಾಳು ಹಾಕಿ sushi ಮಾರುತ್ತಿದ್ದಾರೆ. ಇದಕ್ಕೇನಂತೀರಿ?
ಗತಕಾಲದ ರುಚಿಕರ ತಿಂಡಿಗಳ ಶ್ರಾದ್ಧ ಸಾಂಗವಾಗಿ ನೆರವೇರಿದೆ!

ಪಿ. ಜಯವಂತ ಪೈ, ಕುಂದಾಪುರ
ಸಣ್ಣ ಪಕ್ಷಿಯ ಹೊಡೆತಕ್ಕೆ ದೊಡ್ಡ ವಿಮಾನ ಉರುಳುವುದು ಅಚ್ಚರಿ ಎನಿಸುವುದಿಲ್ಲವೆ?
ಹೃದಯಕ್ಕೇ (ಎಂಜಿನ್‌ಗೆ) ಹೊಡೆಯುತ್ತದಲ್ಲ! ಕೊಕ್ಕು ಚಿಕ್ಕದಾದರೂ ಕಿಕ್ಕು ದೊಡ್ಡದು!

ಅಭಿರಾಂ ಗುಂಡೂಮನೆ, ಸಾಗರ
ತೂಕದಂಥ ಮಾತು ಎಷ್ಟು ಕೆ.ಜಿ. ತೂಕವಿರಬೇಕು?
ಆಲಿಸಿದವರ ಮನವೆಂಬ ತಕ್ಕಡಿಯ ತಟ್ಟೆ ಸಮ್ಮತಿಯಿಂದ ಮೇಲೇರುವಷ್ಟು ಕೆ.ಜಿ.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು
ಸತ್ಯ ಹೇಳುವವರಿಗಿಂತ ಸುಳ್ಳು ಹೇಳುವವರು ಏಕೆ ಹೆಚ್ಚು ಜನಪ್ರಿಯರಾಗುತ್ತಿದ್ದಾರೆ?
ಸತ್ಯವಂತರಿಗೆ ಸುಳ್ಳರಷ್ಟು ಆಕರ್ಷಕವಾಗಿ ಕಥೆ ಕಟ್ಟಲು ಬರುವುದಿಲ್ಲ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನೋವಿಗೂ, ನಲಿವಿಗೂ ಹೆಣ್ಣೇ ಕಾರಣ ಎಂದು ಇಲ್ಲೊಬ್ಬ ಹಾಡುತ್ತಿದ್ದಾನಲ್ಲ?
'ಅ' ಬದಲು 'ಹ' ಉಚ್ಚರಿಸುವವನಂತೆ. ರಾತ್ರಿ ಏರಿಸಿದ 'ಎಣ್ಣೆ'ಯ ಪ್ರಭಾವ!

ಗಂಗಾವತಿ, ಬೆಂಗಳೂರು
ಈಗಿನ ರಾಜಕಾರಣಿಗಳು ತಮ್ಮ ಹೆಸರಿನ ಮುಂದೆ ತಮ್ಮ ತಂದೆಯ ಹೆಸರನ್ನು ಸೇರಿಸಿಕೊಳ್ಳುವರಲ್ಲಾ?
ತನ್ನ ಗುಣಾವಗುಣಗಳು ಎಲ್ಲಿಂದ ಬಂದವೆಂದು ಸೂಚಿಸಲಂತೆ.

ಟಿ.ಕೆ. ಮೂರ್ತಿ, ಉಜಿರೆ
ದೇವರು ಪ್ರತ್ಯಕ್ಷನಾಗಿ ಮೂರು ವರಗಳನ್ನು ಕರುಣಿಸಿದರೆ ನೀವು ಕೇಳುವ ವರಗಳು ಯಾವುವು?
ಪರಿಸರ, ಜಾತಿ, ಇಂಟರ್ನೆಟ್ ಮಾಲಿನ್ಯಗಳನ್ನು ಗುಡಿಸುವ 3 ಪೊರಕೆಗಳನ್ನು ಕೇಳುವೆ.

ಎನ್. ವೈದೇಹಿ, ಮೈಸೂರು
ಸರ್ವಾಂಗಗಳು ಸುಸ್ಥಿತಿಯಲ್ಲಿರುವವರಿಗಿಂತ ಅಂಗವಿಕಲರೇ ಹೆಚ್ಚು ಸಾಧನೆ ಮಾಡುವರು. ಕಾರಣ?
ನೀರ್ಗುಣ! ಇಳಿಜಾರಿನಲ್ಲಿ ಸಲೀಸಾಗಿ ಹರಿವ ಜಲ ಒತ್ತಡ ಬಿರುಕಿನಲ್ಲಿ ಕಾರಂಜಿ!

## ಬಹುಮಾನಿತ ಪ್ರಶ್ನೆ

ಮೋಹನ್ ಎಸ್., ಮೈಸೂರು
ನಮಗಾಗದವರನ್ನು ಬೈಯುತ್ತಿದ್ದರೆ ನೆಮ್ಮದಿ ಎನಿಸುವುದು ಏಕೆ?
ನಮಗೆ ಕೆಟ್ಟ ಹೆಸರು ಬರದೆ ನಮ್ಮ ಉದ್ದೇಶ ಈಡೇರುವುದರಿಂದ.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಮಾನವನಿಗೆ ಹಸಿವೇ ಇಲ್ಲದಿದ್ದರೆ?
Eggಗಿಂತ Pegಏ ವಿಪರೀತ ಖರ್ಚಾಗುತ್ತಿತ್ತು; ಬಾಯಾರಿಕೆ ಇರುತ್ತಿತ್ತಲ್ಲ!

ಎಲ್ಐಸಿ ವಿಜೇಂದ್ರ, ಮೈಸೂರು
ಕೆಲವರು ಸಿಗದ ವಸ್ತುವಿಗೇಕೆ ಹುಡುಕಾಡುವುದು?
ಏಕೆಂದರೆ ಅದು ಅವರ ಮನವನ್ನು ಕಾಡುವುದು.

ದಿನೇಶ್, ಗುಡ್ಡದೂರು
ಯಮಮಹಾರಾಜರು ಎಂದಾದರೂ ನಿಮಗೆ ಪ್ರಶ್ನೆ ಕೇಳಿದ್ದಾರಾ ರಾಮ್?



ತನ್ನ ವಾಹನದಷ್ಟೇ ಜಾಣರಾದ ಕೆಲವರ ಮೂಲಕ ಕೇಳಿರುವನಂತೆ!

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ
ವೈಫೈಗೂ ವೈಫ್ ಐಗೂ ಏನು ವ್ಯತ್ಯಾಸ?
ವೈಫೈಗೆ ಟವರ್ ಮುಖ್ಯ; ವೈಫ್ ಐಗೆ ಪವರ್ ಮುಖ್ಯ.

ವಿ. ಹೇಮಂತಕುಮಾರ್, ಬೆಂಗಳೂರು
ಮೋಹಿನಿ ಬಣ್ಣದ ಸೀರೆಯಲ್ಲಿ ಕಾಣಿಸಿಕೊಳ್ಳುವುದಿಲ್ಲವೆ?
ಊಹೂಂ. ಬೇರೆ ಬಣ್ಣಗಳು ಸುತ್ತಲಿನ ಕತ್ತಲಿಗೆ ಕಾಂಟ್ರಾಸ್ಟ್ ಆಗುವುದಿಲ್ಲ.

ಸಿ.ಕೆ. ಗಣಪ್ಪನವರ ಮುಂಡರಗಿ
ಈಗೀಗ ಹುಡುಗಿಯರೇ ಹುಡುಗರನ್ನು ವರಿಸಲು ಆಯ್ಕೆ ಮಾಡುವ ಸ್ಥಿತಿ ಬಂದಿದೆಯಲ್ಲ?
ತಾನು ಟ್ರೈನ್ ಮಾಡುವ ಪ್ರಾಣಿಯನ್ನು ಆರಿಸುವ ಹಕ್ಕು ರಿಂಗ್ ಮಾಸ್ಟರ್‌ಗೆ ಇರುವುದು ಸೂಕ್ತ.

■ ರಾಮ್